ಓ.ಎಸ್. ನಂ. 53/2014

ಪಿ.ಡಬ್ಲ್ಯುಃ 01 (Ramanna)

ದಿನಾಂಕಃ 20.09.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ – ಶ್ರೀ HGR ವಕೀಲರಿಂದ.

ದಾವಾ ಸರ್ವೆ ನಂಬರ್ 119 ಎ ಮತ್ತು 119 ಬಿ. 119 ಎ ವಿಸ್ತೀರ್ಣ ಎಷ್ಟಿದೆ ಎಂದರೆ ಎರಡೂ ಸೇರಿ 9 ಎಕರೆ ಇದೆ, ಸರ್ವೆ ನಂಬರ್ 119 ಎ ವಿಸ್ತೀರ್ಣ 2.60 ಸೆಂಟ್ಸ್ ಇದೆ. ಸದರಿ ಆಸ್ತಿಗಳು ಹಾಲಸಾಗರ ಗ್ರಾಮದ ವ್ಯಾಪ್ತಿಯಲ್ಲಿವೆ. ಜಮೀನು ಬರಬೇಕೆಂಬ ಕಾರಣಕ್ಕೆ ದಾವೆ ಹೂಡಿರುತ್ತೇನೆ. ಪೆನ್ನಯ್ಯರವರು ನಾವು ನೀಡಿದ ಕಾನೂನು ತಿಳುವಳಿಕೆ ಪತ್ರಕ್ಕೆ ಪ್ರತಿವಾದಿ 1 ರವರು ಉತ್ತರ ನೀಡಿದ್ದರು ಎಂದರೆ ಹೌದು. ಅದರಲ್ಲಿ ನನಗೂ ಮತ್ತೆ ಪ್ರತಿವಾದಿ 1 ರವರಿಗೆ ಯಾವುದು ಸಂಬಂಧ ಇಲ್ಲ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಮ್ಮ ಕುಟುಂಬಕ್ಕೂ ಅವರ ಕುಟುಂಬಕ್ಕೂ ಯಾವುದೇ ಸಂಬಂಧ ಇಲ್ಲ.

ನನ್ನ ತಾತನ ಹೆಸರು ಪೆನ್ನಯ್ಯ. ಪ್ರತಿವಾದಿ 1ರವರ ತಾತನ ಹೆಸರು ಪೋತಯ್ಯಗಾರ ಪೆನ್ನಯ್ಯ ಎಂದರೆ ಪಾತಯ್ಯಗಾರಿ ಪೆನ್ನಯ್ಯ. ಪ್ರತಿವಾದಿ 1ರವರ ತಾತನ ಹೆಸರು ಪೋತಯ್ಯಗಾರ ಪೆನ್ನಯ್ಯ ಎಂದರೆ ಹೌದು. ಪ್ರತಿವಾದಿ 1ರವರ ತಂದೆಯ ಹೆಸರು ಗುಡ್ಡೆ ಪಾತಯ್ಯ ಎಂದರೆ ಪಾತಯ್ಯ. ನನ್ನ ತಂದೆಯ ಹೆಸರು ಹನುಮಂತಪ್ಪ. ಹಾಗಾಗಿ ನನ್ನ ಕುಟುಂಬಕ್ಕೂ 1 ನೇ ಪ್ರತಿವಾದಿ ಕುಟುಂಬಕ್ಕೂ ಸಂಬಂಧ ಇಲ್ಲ ಎಂದರೆ ಇಲ್ಲ. ದಾವಾ ಸ್ವತ್ತುಗಳು ನಮ್ಮ ಪಿತ್ರಾರ್ಜಿತ ಆಸ್ತಿ ಅಲ್ಲ ಎಂದರೆ ನನ್ನ ಹಾಗೂ 1 ನೇ ಪ್ರತಿವಾದಿಯ ಕುಟುಂಬದ ಆಸ್ತಿ.

ದಾವಾ ಆಸ್ತಿ ಸರ್ವೆ ನಂಬರ್ 119 ಎ ಮತ್ತು 119 ಬಿ ರಲ್ಲಿ ತಲಾ 1 ಎಕರೆಯನ್ನು 1 ನೇ ಪ್ರತಿವಾದಿ 2004 ರಲ್ಲಿ ಶ್ರೀನಿವಾಸ ಶೆಟ್ಟಿ ಕಡೆಯಿಂದ ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅದನ್ನು ಆತ ಆಯ್ಕೆ ಮಾಡಿದ್ದು, ಕ್ರಯ ಪತ್ರದ ಮೂಲಕ ಬಿಡಿಸಿಕೊಂಡಿರುತ್ತಾರೆ. ಆತ ಖರೀದಿ ಮಾಡಿದರು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕ್ರಯ ಪತ್ರದನ್ವಯ ಆತನ ಹೆಸರಿಗೆ ಖಾತೆ ವರ್ಗಾವಣೆಯಾಗಿದೆ ಎಂದರೆ ಆತ ಮಾಡಿಸಿಕೊಂಡಿರಬಹುದು. ಖರೀದಿ ಆದ ನಂತರ ಆತನೇ ಸ್ವಾಧೀನದಲ್ಲಿದ್ದಾನೆ ಎಂದರೆ ಸರ್ವೆ ನಂಬರ್ 119 ರಲ್ಲಿ ನಾವು ಮಾಡುತ್ತಿದ್ದೇವೆ, ಅವರು ಮಾಡುತ್ತಿದ್ದಾರೆ.

ಈ ಖರೀದಿ ಮಾಡಿದ ಆಸ್ತಿಯ ನಂತರ 4 ಎಕರೆ 1 ನೇ ಪ್ರತಿವಾದಿಯ ಪಿತ್ರಾರ್ಜಿತ ಆಸ್ತಿ ಇದೆ ಎಂದರೆ ಸುಳ್ಳು. ಅದರ ಚೆಕ್‌ಬಂದಿ ಪೂರ್ವಕ್ಕೆ ತಿರುಪಾಲಯ್ಯ, ಪಶ್ಚಿಮಕ್ಕೆ ರಸ್ತೆ, ಉತ್ತರಕ್ಕೆ ಪೆನ್ನಯ್ಯ ಖರೀದಿ ಮಾಡಿದ

ಜಮೀನು, ದಕ್ಷಿಣಕ್ಕೆ ಕಂಬಯ್ಯನ ಜಮೀನು ಇದೆ ಎಂದರೆ ಸುಳ್ಳು. 1 ನೇ ಪ್ರತಿವಾದಿಗೆ ದಾವಾ ಆಸ್ತಿಯಲ್ಲಿ 6 ಎಕರೆ ಇದೆ ಎಂದರೆ ಸುಳ್ಳು. ಪೂರ್ವಕ್ಕೆ ತಿರುಪಾಲಯ್ಯ, ಪಶ್ಚಿಮಕ್ಕೆ ರಾಯಾಪುರ ರಸ್ತೆ, ಉತ್ತರಕ್ಕೆ ಗುಡ್ಡ, ದಕ್ಷಿಣಕ್ಕೆ ಕಂಬಯ್ಯನ ಜಮೀನು ಇದೆ ಎಂದರೆ ಸುಳ್ಳು. ಸದರಿ 4 ಎಕರೆ ಜಮೀನನ್ನು 1 ನೇ ಪ್ರತಿವಾದಿಯ ತಂದೆ ಸಾಗುವಳಿ ಮಾಡುತ್ತಿದ್ದರು ಎಂದರೆ ಎಲ್ಲರೂ ಮಾಡುತ್ತಿದ್ದೆವು. ಅವರು ಮೃತಪಟ್ಟ ನಂತರ 1 ನೇ ಪ್ರತಿವಾದಿ ಸಾಗುವಳಿ ಮಾಡುತ್ತಿದ್ದರು ಎಂದರೆ ಎಲ್ಲರೂ ಮಾಡುತ್ತಿದ್ದೆವು. ನಮಗೂ 1 ನೇ ಪ್ರತಿವಾದಿಯ ಕುಟುಂಬಕ್ಕೂ ಸಂಬಂಧ ಇಲ್ಲದ ಕಾರಣ ಭಾಗ ಕೇಳುವ ಪ್ರಶ್ನೆ ಬರುವುದಿಲ್ಲ, ನಾವು ಅವರಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ದಾವೆ ಹೂಡಿದ್ದೇವೆ ಎಂದರೆ ಸರಿಯಲ್ಲ.

ಪಾಟೀ ಸವಾಲು 1 ನೇ ಪ್ರತಿವಾದಿ ಪರ ಮುಕ್ತಾಯ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.